# ಈಗ ಹೊಸಬರಿಗೆ ಹೆಚ್ಚು ಅವಕಾಶ

## ಭವ್ಯಾ ಗೌಡ

### ಕಲರ್ಸ್ ಕನ್ನಡದ 'ಗೀತಾ' ನಾಯಕಿ



ಚಿತ್ರ: ರಂಜು

◆ **ಬಣ್ಣದ ಪಯಣ ಹೇಗಿದೆ?**

ಒಂದು ರೀತಿಯಲ್ಲಿ ಕಲರ್‌ಫುಲ್ ಆಗಿಯೇ ಇದೆ. ಈ ಕ್ಷೇತ್ರ ನನಗೆ ಹೊಸತಾಗಿರುವುದರಿಂದ ನಿತ್ಯವೂ ಹೊಸತನ್ನು ಕಾಣುತ್ತಿದ್ದೇನೆ ಮತ್ತು ಕಲಿಯುತ್ತಿದ್ದೇನೆ. ಕ್ಯಾಮೆರಾದ ಕಣ್ಣಿನಲ್ಲಿ ಬೇರೆ ಬೇರೆ ರೀತಿ ಕಾಣುತ್ತಿದ್ದೇನೆ. ಇದೇ ಮೊದಲ ಧಾರಾವಾಹಿ ಆಗಿದ್ದರಿಂದ ಕಷ್ಟದ ಜೊತೆ ಸಿಕ್ಕಾಪಟ್ಟೆ ಎಂಜಾಯ್ ಮಾಡಿದೆ. ಹೊರವಲಯದಲ್ಲಿ ಚಿತ್ರೀಕರಣ ಇದ್ದಾಗ ಕಲಾವಿದರ ನೈಜ ಬದುಕು ಅರ್ಥವಾಯಿತು. ನೋಡುತ್ತಿದ್ದವರಿಗೆ ನಟ–ನಟಿಯರು ಎಷ್ಟು ಎಂಜಾಯ್ ಮಾಡ್ತಾರೆ. ಅವರ ಶೋಕಿ ನೋಡಿ ಎಂದು ಮಾತನಾಡಿಕೊಳ್ಳಬಹುದು. ತೆರೆಯಲ್ಲಿ ಕಂಡಷ್ಟು ಸಂಭ್ರಮ ಕೆಲಸ ಮಾಡುವಾಗ ಇರಲ್ಲ. ಎಲ್ಲೋ ಕೂತುಕೊಂಡು ಹೀಗೆ ಮಾಡಬಹುದು ಹಾಗೆ ಮಾಡಬಹುದು ಎಂದು ತೀರ್ಮಾನಿಸುತ್ತೇವೆ. ನಾನೂ ಅದನ್ನು ಮಾಡಿದ್ದೇನೆ. ಈ ಕ್ಷೇತ್ರಕ್ಕೆ ಬಂದನಂತರ ಹೀಗೆ ಹೇಳಬಾರದು ಎನ್ನುವುದು ಗೊತ್ತಾಯಿತು.

◆ **ಅವಕಾಶ ಸಿಕ್ಕಿದೆ ಎಂದು ಗೊತ್ತಾದ ತಕ್ಷಣ ಹೇಗಿತ್ತು?**

ಮನೆಯಲ್ಲಿ ಹೇಳಿರಲಿಲ್ಲ. ಪ್ರೋಮೊ ಪ್ರಕಟಣೆ ಆಗುವ ತನಕ ಅಮ್ಮನಿಗೆ ಗೊತ್ತೇ ಇರಲಿಲ್ಲ. ನಮ್ಮ ಅಮ್ಮನಿಗೆ ಟೀವಿಯಲ್ಲಿ ಬರುತ್ತಿದೆ ನೋಡು ಎಂದು ಹೇಳಿದೆ. ಏಕೆ ಹೀಗೆ ಮಾಡಿದೆ ಅಂದರೆ ನನಗೆ ಅವಕಾಶ ನಿಶ್ಚಿತ ಎಂಬ ವಿಶ್ವಾಸ ಇರಲಿಲ್ಲ. ನಟನೆ ಹೊಸತು, ಪ್ರೋತ್ಸಾಹಿಸಲು ಇಲ್ಲಿ ಪರಿಚಿತ ಬಂಧು ಬಳಗ ಯಾರೂ ಇರಲಿಲ್ಲ. ನನ್ನ ಸ್ವಯಂ ಪ್ರಯತ್ನದಿಂದ ಬಂದಿದ್ದೆ. ಚಿತ್ರೀಕರಣಕ್ಕೆ ಬರಲು ಹೇಳಿದಾಗ ಕೂಡ ನಂಬಿಕೆ ಇರಲಿಲ್ಲ. ಕೊನೆ ಹಂತದಲ್ಲಿ ಏನಾದರೂ ಬದಲಾವಣೆಯಾದರೆ ಎನ್ನುವ ಅಂಜಿಕೆ ಕಾಡುತ್ತಿತ್ತು. ಅದಕ್ಕೆ ಕೊನೆಯ ಕ್ಷಣದವರೆಗೂ ಕಾದು ಹೇಳಿದೆ. ಅದಕ್ಕೂ ಮೊದಲು ಅಪ್ಪ–ಅಮ್ಮ ಟೀವಿಯಲ್ಲಿ ನೀನೂ ಬರಬಹುದು. ನಿನಗೆ ಅಂತಹ ಸಾಮರ್ಥ್ಯ ಇದೆ ಎಂದು ಹೇಳುತ್ತಿದ್ದರು. ನಮ್ಮ ಪೋಷಕರಲ್ಲಿ ನೈಜ ಸಂತೋಷವನ್ನು ನನ್ನ ಪ್ರೋಮೊ ಬಿತ್ತರವಾದಾಗ ಕಂಡೆ. ಅವರ ಆಸೆಯನ್ನು ಪೂರೈಸಿದ ಸಂಭ್ರಮ ನನ್ನ ಮನದಲ್ಲಿ ನಲಿದಾಡಿ ಮೂಕಳಾಗಿದ್ದೆ. ಆಗ ನನ್ನ ಬಗ್ಗೆ ಹೆಮ್ಮೆ ಅನಿಸಿತು.

◆ **ನಟಿಯಾಗಲಿ ಪ್ರೇರಣೆ, ಹೇಗೆ ತಯಾರಿ ಮಾಡಿಕೊಂಡಿರಿ?**

ಈ ಕ್ಷೇತ್ರದ ಬಗ್ಗೆ ಖಂಡಿತ ಏನೂ ಗೊತ್ತಿರಲಿಲ್ಲ. ಟೀವಿ–ಸಿನಿಮಾ ನೋಡುವ ಹುಚ್ಚು ಮಾತ್ರ ತುಂಬ ಇತ್ತು. ಇವರ ರೀತಿ ಆಗಬೇಕು, ಅವರ ರೀತಿ ಆಗಬೇಕು ಎನ್ನುವ ಆಸೆ ಮೂಡುತ್ತಿತ್ತು. ಆದರೆ, ಹಾಗೆ ಆಗಲು ನಮ್ಮ ಹತ್ತಿರ ದುಡ್ಡು ಇರಬೇಕು ಎಂದು ಅನಿಸುತ್ತಿತ್ತು. ಫ್ಯಾಮಿಲಿ ಹಿನ್ನೆಲೆ ದೊಡ್ಡದಾಗಿ ಇರಬೇಕು ಎಂದು ಭಾವಿಸಿದ್ದೆ. ನಮ್ಮ ಪೋಷಕರಿಗೆ ನಾನು ನಟಿ ಆಗಬೇಕು ಎನ್ನುವ ಆಸೆ ಇತ್ತು. ಅದರಲ್ಲಿ ಅಮ್ಮನ ಪ್ರೋತ್ಸಾಹ ಮೂಲ ಪ್ರೇರಕ ಶಕ್ತಿ. ಅಮ್ಮನ ಖುಷಿಗಾಗಿ ಆಡಿಷನ್ ಇದೆ ಎಂದು ಆಗಾಗ ಹೇಳ್ತಾ ಇದ್ದೆ. ಇದು ನನ್ನ ಮೊದಲ ಸೀರಿಯಲ್.

◆ **ಮುಂದಿನ ಯೋಜನೆ ಬಗ್ಗೆ ಹೇಳುವುದಾದರೆ.**

ಸಮಯ ಬಂದ ಹಾಗೆಯೇ ಸಾಗುವುದು ಒಳ್ಳೆಯದು ಎಂದುಕೊಂಡಿದ್ದೇನೆ. ಈ ರೀತಿಯ ಪಾತ್ರ ಮಾಡಬೇಕು ಎಂದು ಆಸೆ ಇಟ್ಟುಕೊಂಡು ಅದು ಸಿಗದಿದ್ದರೆ ಕಷ್ಟ. ನನಗೆ ಅವಕಾಶ ಸಿಕ್ಕಿದ್ದೇ ತೀರಾ ಆಕಸ್ಮಿಕ ಇರಬಹುದು. ನನಗೆ ಪಾತ್ರಕ್ಕಿಂತ ಒಳ್ಳೆಯ ಕಥೆ ಮುಖ್ಯ ಎಂದು ಅನಿಸುತ್ತದೆ. 'ಡಿಯರ್ ಕಣ್ಮಣಿ' ಸಿನಿಮಾಗೆ ಅವಕಾಶ ಸಿಕ್ಕಿದೆ. ಕೊರೊನಾ ಕಾರಣಕ್ಕೆ ಅದು ವಿಳಂಬವಾಗುತ್ತಿದೆ. ತೆಲುಗಿನಲ್ಲಿಯೂ ಒಂದು ಧಾರಾವಾಹಿ ಮಾಡುತ್ತಿದ್ದೇನೆ.

◆ **ನಟಿಯಾದ ನಂತರದ ಜೀವನ ಹೇಗಿದೆ?**

ಹೊರಗಡೆ ಹೋದರೆ ಮಾಸ್ಕ್ ತೆಗೆಯುವುದಿಲ್ಲ. ಶೋಕಿ ನೋಡು ಎಂದು ಬೈದುಕೊಳ್ಳುತ್ತಾರೆ ಎನ್ನುವ ಅಂಜಿಕೆ. ಎಲ್ಲಾದರೂ ಪಾನಿಪೂರಿ ತಿನ್ನಲು ಹೋದಾಗ ಕೂಡ ಸೆಲ್ಫಿ ತೆಗೆದುಕೊಳ್ಳಲು ಬರುತ್ತಾರೆ. ಅದು ಅವರ ಪ್ರೀತಿ ಎಂದು ಭಾವಿಸುತ್ತೇನೆ. ಅವರ ಜೊತೆ ಹತ್ತು ನಿಮಿಷ ಕಳೆದು ಥ್ಯಾಂಕ್ಸ್ ಹೇಳಿ ಹೋಗುತ್ತೇನೆ. ಅವರಿಂದಲೇ ಬೆಳೆಯುತ್ತಿದ್ದೇನೆ ಎನ್ನುವ ಕೃತಜ್ಞ ಮನೋಭಾವ ನನ್ನದು. ಸದ್ಯ ನಾನು ಹೊರಗಡೆ ಹೋಗುವುದೇ ಕಡಿಮೆ ಆಗಿದೆ. 15 ದಿನ ಕನ್ನಡಕ್ಕೆ, 15 ದಿನ ತೆಲುಗಿಗೆ ಕೊಡುವುದರಿಂದ ನನಗೆ ಸಮಯ ಇಲ್ಲದಂತೆ ಆಗಿದೆ.

ಡಯಟ್ ಮಾಡುತ್ತೇನೆ. ಅದನ್ನು ನಿರ್ವಹಣೆ ಮಾಡಲು ಆಗುತ್ತಿಲ್ಲ. ಜಿಮ್– ವ್ಯಾಯಾಮಕ್ಕೆ ಸಾಧ್ಯ ಆಗುತ್ತಿಲ್ಲ ಎನ್ನುವ ಕೊರಗು ಇದೆ. ಯಾಕೆ ಹೀಗೆ ಮಾಡಿಕೊಂಡೆ ಎನ್ನುವ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಮುಂದಿನ ವಾರದಿಂದ ಜಿಮ್‌ಗೆ ಹೋಗಲೇ ಬೇಕು ಎನ್ನುವ ಶಪಥ ಮಾಡಿಕೊಂಡಿದ್ದೇನೆ.

◆ **ಅವಕಾಶದ ಬಗ್ಗೆ ಏನಾದರೂ ಹೇಳಬೇಕು ಎಂದರೆ?**

ಸಾಕಷ್ಟು ಜನ ಪ್ರಭಾವ ಇದ್ದರೆ ಮಾತ್ರ ಸಿನಿಮಾ–ಧಾರಾವಾಹಿಗಳಲ್ಲಿ ಅವಕಾಶ ಸಿಗುತ್ತದೆ ಎಂದುಕೊಂಡಿದ್ದಾರೆ. ನಿಜ ಹೇಳಬೇಕು ಎಂದರೆ, ನಾನು ಹಾಗೆ ಯಾವುದೇ ಪ್ರಭಾವದಿಂದ ಬಂದಿಲ್ಲ. ನನ್ನ ಗೆಳತಿ ಹೇಳಿದ ಕಾರಣಕ್ಕೆ ಆಡಿಷನ್ ನೀಡಿದ್ದೆ, ಅವಕಾಶ ಸಿಕ್ಕಿದೆ. ಬೇಕಿದ್ದರೆ ನಮ್ಮಲ್ಲಿಯೇ ಅನೇಕ ಹೊಸ ಮುಖಗಳನ್ನು ನೋಡಬಹುದು. ಮೊದಲಿನಂತೆ ಅನುಭವಿಗಳನ್ನೇ ಈಗ ಹುಡುಕುತ್ತಿಲ್ಲ ಎನ್ನುವ ಮಾತನ್ನು ನಾನು ಇಲ್ಲಿ ಕೇಳಿದ್ದೇನೆ. ಹೊಸಬರಲ್ಲೂ ಪ್ರತಿಭೆ ಇದ್ದರೆ ಖಂಡಿತ ಅವಕಾಶ ಸಿಗುತ್ತದೆ. ಆ ಅವಕಾಶವನ್ನು ಪಡೆಯುವ ನಿಟ್ಟಿನಲ್ಲಿ ನಾವು ಶ್ರಮ ವಹಿಸಬೇಕು.

■ **ರಾಘವೇಂದ್ರ ಕೆ.**